ನೀಡಿದರೆ ಪ್ರಾಯಶಃ ಒಂದು ಶಾಶ್ವತವಾಗಿರತಕ್ಕಂಥ ಬರಗಾಲಕ್ಕೆ ನಿವಾರಣೆ ಮಡಲಿಕ್ಕೆ ಒಂದು ದಿಕ್ಕನ್ನು ನಾವು ಸೂಚಿಸಿದ ಹಾಗೆ ಆಗುತ್ತದೆಂದು ಈ ಸದನದ ಸದಸ್ಯರಿಗೆ ನಾನು ವಿನಂತಿಯನ್ನು ಮಾಡಿಕೊಂಡು ಈ ತಿದ್ದುಪಡಿಯನ್ನು ಮಂಡಿಸಲಿಕ್ಕೆ ನಾನು ತಮ್ಮಲ್ಲಿ ಅವಕಾಶವನ್ನು ಕೋರುತ್ತಿದ್ದೇನೆ.

3. ವಿಷಯ:– ನಿಯಮ 159ರ ಪ್ರಸ್ತಾವನೆಗೆ ತಿದ್ದುಪಡಿ ಮಂಡನೆ

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) :– ಮಾನ್ಯ ಅಧ್ಯಕ್ಷರೆ, ನಿಯಮ 159ರ ಪ್ರಸ್ತಾವನೆಯ ಮೂಲಕ ಸಾರ್ವಜನಿಕ ಹಿತದೃಷ್ಟಿಯ ವಿಷಯಕ್ಕೆ ನೀಡಿರುವ ಪ್ರಸ್ತಾವಕ್ಕೆ ನಾನು ಈ ಕೆಳಕಂಡಂತೆ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಬರಗಾಲವು ಮರುಕಳಿಸುತ್ತಿರುವುದರಿಂದ, ಈಗಾಗಲೇ ಕೈಗೊಂಡಿರುವ ಬರಗಾಲ ಕಾಮಗಾರಿಗಳು ಶಾಶ್ವತ ಪರಿಹಾರದ ದಿಕ್ಕನ್ನು ತೋರಿಸದೇ ಇರುವುದರಿಂದ, ಈಗಾಗಲೇ ಆಯವ್ಯಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಗೆ ವಿನಿಯೋಗಿಸಿದೆ ಹಣವನ್ನು ದ್ವಿಗುಣಗೊಳಿಸಿ ಹಗೂ ಈ ವರ್ಷ ಕೂಡ ರೈತರ ಬಡ್ಡಿಯನ್ನು ಮನ್ನಾ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸುವುದು.

ತಿದ್ದುಪಡಿಯನ್ನು ಮಂಡಿಸಲಾಯಿತು

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಅದನ್ನು ಸಭೆ ಒಪ್ಪಿಕೊಳ್ಳಬೇಕು, ರೈತರಿಗಾಗುವ ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರ ಇವತ್ತು ಮಾನ್ಯ ಶಿವಾನಂದ ಪಾಟೀಲ್‌ರವರು ಕೇಳಿದ್ದಾರೆ, ಹೀಗಾಗಿ ಅದು ರಾಜ್ಯಕ್ಕೆ ಅನ್ವಯಿಸುವಂಥ ಕಾರ್ಯಕ್ರಮವಾಗಬೇಕು.

ಅಧ್ಯಕ್ಷರು :– ಸ್ವಲ್ಪ ತಡೀರಿ, ತಿದ್ದುಪಡಿ ಮಂಡಿಸಲಾಗಿದೆ ನಾವು ಈಗ ಅದನ್ನು ಅಡ್ಮಿಟ್ ಮಾಡಬೇಕೊ, ಅಥವಾ ಬೇಡವೇ ಎನ್ನುವುದಕ್ಕೆ ನಮ್ಮ ಕಾನೂನಿನ ಪ್ರಕಾರ ಮತಕ್ಕೆ ಹಾಕುತ್ತೇವೆ.

ತಿದ್ದುಪಡಿ ಪ್ರಸ್ತಾಪವನ್ನು ಮತಕ್ಕೆ ಹಾಕುವುದು

ಅಧ್ಯಕ್ಷರು :– ಪ್ರಸ್ತಾಪ ಏನೆಂದರೆ ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಬರಗಾಲವು ಮರುಕಳಿಸುತ್ತಿರುವುದರಿಂದ ಈಗಾಗಲೇ ಕೈಗೊಂಡಿರುವ ಬರಗಾಲ ಕಾಮಗಾರಿಗಳು ಶಾಶ್ವತ ಪರಿಹಾರದ ದಿಕ್ಕನ್ನು ತೋರಿಸದೇ ಇರುವುದರಿಂದ; ಈಗಾಗಲೇ ಆಯವ್ಯಯದಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಸಣ್ಣ ನೀರಾವರಿ ಇಲಾಖೆಗೆ ವಿನಿಯೋಗಿಸಿದ ಹಣವನ್ನು ದ್ವಿಗುಣಗೊಳಿಸಿ ಹಾಗೂ ಈ ವರ್ಷ ಕೂಡಾ ರೈತರ ಬಡ್ಡಿಯನ್ನು ಮನ್ನಾ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸುವುದು."

ತಿದ್ದುಪಡಿ ಪ್ರಸ್ತಾಪ ತಿರಸ್ಕರಿಸಲ್ಪಟ್ಟಿತು.

ಗೊಂದಲ

ಅಧ್ಯಕ್ಷರು :– ನೋ, ಅಲ್‌ರೈಟ್ ಡಿವಿಜನ್ ಬೇಕೆ? ಹೇಳಿ, ಧ್ವನಿಮತದಲ್ಲಿ ತಿದ್ದುಪಡಿ ಪ್ರಸ್ತಾವ ತಿರಸ್ಕೃತವಾಗಿದೆ...

ಅಧ್ಯಕ್ಷರು :– ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು. ತಿದ್ದುಪಡಿ ಪ್ರಸ್ತಾವ ಧ್ವನಿಮತದ ಮೂಲಕ ತಿರಸ್ಕೃತವಾಗಿದೆ, ಈ ವಿಷಯ ಇಲ್ಲಿಗೆ ಮುಕ್ತಾಯವಾಗಯಿತು ಬಿಡಿ.

ಶ್ರೀ ಎ. ರಾಮದಾಸ್ :– ಮಾನ್ಯ ಅಧ್ಯಕ್ಷರೇ, ನಾವು ಇದನ್ನು ಡಿಮ್ಯಾಂಡ್ ಮಾಡುತ್ತಿದ್ದೇವೆ, ಇದನ್ನು ದಯಮಾಡಿ ವೋಟಿಂಗ್ ಪ್ರಾವಿಜನ್ ಮಾಡಿಕೊಡಬೇಕು.

ಅಧ್ಯಕ್ಷರು :– ನೋಡಿ ನಾನು ಈ ಮನೆಯ ನಿಯಾಮಾವಳಿಯ ಪ್ರಕಾರ ಹೋಗುತ್ತಿದ್ದೇನೆ ಧ್ವನಿ ಮತದಲ್ಲಿಯೇ ತಿದ್ದುಪಡಿ ಪ್ರಸ್ತಾಪ ತಿರಸ್ಕೃತವಾಗಿದೆ.

ಗೊಂದಲ

ಅಧ್ಯಕ್ಷರು :– ಅದು ಬೇಕಾಗಿಲ್ಲ. ನಿಮಗೇನಾದರೂ ಡಿವಿಜನ್ ಬೇಕಗಿದ್ದರೆ ಅದನ್ನು ಕೂಡ ಮಾಡೋಣ.

ಗೊಂದಲ

ಶ್ರೀ ಎ ರಾಮದಾಸ್ :– ನಾವು ಈಗಾಗಲೇ ಡಿವಿಜನ್‌ಗೆ ಅವಕಾಶ ಕೊಡಿ ಎಂದು ಒತ್ತಾಯ ಮಾಡಿದ್ದೇವೆ. ಆದ್ದರಿಂದ, ತಾವು ಇದಕ್ಕೆ ಒಪ್ಪಿಗೆ ಕೊಡಬೇಕು... ದಯವಿಟ್ಟು ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :– ಧ್ವನಿ ಮತದ ಮೂಲಕ ಪಾಸ್ ಆಗದಿದ್ದರೆ ಮಾತ್ರ ಡಿವಿಜನಗೆ ಅವಕಾಶ ಕೇಳಬೇಕಾಗುತ್ತದೆ. ಆದರೆ, ತಾವು ಈಗ ಮಾಡುತ್ತಿರುವುದು ನಿಯಮಾವಳಿ ಪ್ರಕಾರ ಸರಿಯಲ್ಲ.

ಅಧ್ಯಕ್ಷರು :– ನಾನು ಹೇಳುವುದನ್ನು ಸ್ವಲ್ಪ ಕೇಳಿ. ಧ್ವನಿ ಮತದ ಮೂಲಕ ಬಿದ್ದು ಹೋದ ಮೇಲೆ ಮತ್ತೆ ಡಿವಿಜನ್ ಮಾಡುವುದಕ್ಕೆ ಎಲ್ಲಿ ಆಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ :– ಬರುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :– ಪ್ರಸ್ತಾವನೆ ಇಲ್ಲ ಎನ್ನುವವರ ಪರವಾಗಿದೆ ಎಂದು ಹೇಳಿದ ಕೂಡಲೇ ನಾವು ಎದ್ದು ನಿಂತುಕೊಂಡು ಡಿವಿಜನ್ ಮಾಡಬೇಕೆಂದು ಹೇಳಿದ್ದೇವೆ.

ಅಧ್ಯಕ್ಷರು :– ಮಾನ್ಯ ಸುರೇಶ್ ಕುಮಾರ್‌ರವರು ಆ ಸಂದರ್ಭದಲ್ಲಿ ಎದ್ದು ನಿಂತುಕೊಂಡು ಕೇಳಿದ್ದಾರೆಯೇ ಎನ್ನತಕ್ಕಂಥದ್ದು ನಡವಳಿಕೆಯಲ್ಲಿ ಇದೆಯೇ ಎಂಬುದನ್ನು ನೋಡಿ.

ಅಧ್ಯಕ್ಷರು :– ಧ್ವನಿ ಮತದಲ್ಲಿಯೇ ಬಿದ್ದು ಹೋಗಿದೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ತಾವು ಹೇಳುವುದಕ್ಕಿಂತ ಮುಂಚಿತವಾಗಿಯೇ ಡಿವಿಜನ್‌ಗೆ ಅವಕಾಶ ಕೊಡಿ ಎಂದು ನಾವು ಪ್ರೆಸ್ ಮಾಡಿದ್ದೇನೆ.

ಅಧ್ಯಕ್ಷರು :– ನಮ್ಮ ನಡವಳಿಕೆಯಲ್ಲಿ ಏನಿದೆ ಎನ್ನತಕ್ಕಂಥದ್ದನ್ನು ನಾನು ವೆರಿಫೈ ಮಾಡಿಸಿದ್ದೇನೆ. ನಾನು ಧ್ವನಿ ಮತದ ಬಗ್ಗೆ ಹೇಳಿದಂಥ ಸಂದರ್ಭದಲ್ಲಿ ಮಾನ್ಯ ಸುರೇಶ್ ಕುಮಾರ್ ರವರು ಎದ್ದು ನಿಂತುಕೊಂಡು ಡಿವಿಜನ್ ಆಗಬೇಕೆಂದು ಹೇಳಿದ್ದಾರೆ. ಇದು ನಡವಳಿಕೆಯಲ್ಲಿ ಮೆನ್‌ಷನ್ ಆಗಿದೆ. ಈಗ ಬಾಗಿಲು ಮುಚ್ಚಿ, ಡಿವಿಜನ್‌ಗೆ ಅವಕಾಶ ಕೊಡುತ್ತೇನೆ.

ಗೊಂದಲ

ಅಧ್ಯಕ್ಷರು :– ತಮ್ಮ ತಿದ್ದುಪಡಿ ತಿರಸ್ಕೃತವಾದ ನಂತರ ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇಲ್ಲ... ಈಗ ಅದರ ಬಗ್ಗೆ ಮತನಾಡತಕ್ಕಂಥ ಪ್ರಶ್ನೆಯೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :– ಮತದಾನ ಆದಮೇಲೆ ಮತ್ತೆ ಚರ್ಚೆಗೆ ಅವಕಾಶ ಇಲ್ಲ.

ಅಧ್ಯಕ್ಷರು :– ತಿರಸ್ಕೃತವಾದ ಮೇಲೆ ಮತ್ತೆ ಚರ್ಚೆ ಮಾಡತಕ್ಕಂಥ ಪ್ರಶ್ನೆಯೇ ಬರುವುದಿಲ್ಲ. ಈಗ ಎರಡು ನಿಮಿಷ ಬೆಲ್ ಹಾಕಿ ಯಾರಾದರೂ ಹೊರಗೆ ಇದ್ದರೆ ಒಳಗೆ ಬರಲಿ.

ಶ್ರೀ ಪಿ.ಹೆಚ್. ಪೂಜಾರ್ :– ತಾವು ದಯವಿಟ್ಟು ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು :– ತಿದ್ದುಪಡಿ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ. ಅಡ್ಮಿಷನ್ ಸ್ಟೇಜ್‌ನಲ್ಲಿಯೇ ತಿರಸ್ಕೃತವಾಗಿದೆ. ಆದ್ದರಿಂದ ಮತ್ತೆ ಚರ್ಚೆ ಏಕೆ? ತಿರಸ್ಕೃತವಾದ ಮೇಲೆ ಮತ್ತೆ ಚರ್ಚೆಯ ಪ್ರಶ್ನೆಯೆ ಇಲ್ಲ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ಇವತ್ತಿನದಿವಸ ಮಾನ್ಯ ಶಿವಾನಂದ ಎಸ್.ಪಾಟೀಲ್‌ರವರು ರೈತರ ಬಡ್ಡಿ ಮನ್ನಾ ಮಾಡುವ ಬಗ್ಗೆ ಮತ್ತು ತೋಟಗಾರಿಕೆ ಹಾಗೂ ಕೃಷಿ ಬಗ್ಗೆ ಒಂದು ತಿದ್ದುಪಡಿ ಪ್ರಸ್ತಾವನೆಯನ್ನು ತಂದಿದ್ದಾರೆ. ಇದು ನಿಜವಾಗಿಯೂ ಕೂಡ ಉತ್ತಮವಾಗಿದೆ. ಆದ್ದರಿಂದ, ರೈತರ ಪರವಾಗಿ ಇರತಕ್ಕಂಥವರು ಇದರ ಪರವಾಗಿ ಮತ ಕೊಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :– ಅವರ ತಿದ್ದುಪಡಿ ತಿರಸ್ಕೃತವಾಗಿದೆ.

ಗೊಂದಲ

ಶ್ರೀ ಎಸ್. ಸುರೇಶ್ ಕುಮಾರ್ :– ಈಗ ಡಿವಿಜನ್ ಕರೆದಿರತಕ್ಕಂಥದ್ದು ಕೇವಲ ಸದರಿ ಅಮೆಂಡ್‌ಮೆಂಟ್‌ಕ್ಕೆ ಸಂಬಂಧಪಟ್ಟಂತೆಯೇ?

ಅಧ್ಯಕ್ಷರು :– ಹೌದು. ಇದು ಕೇವಲ ಸದರಿ ತಿದ್ದುಪಡಿಗೆ ಮಾತ್ರ. ಬೇರೆ ವಿಷಯಕ್ಕೆ ಸಂಬಂಧಪಟ್ಟಿಲ್ಲ.

ಶ್ರೀ ಎ. ರಾಮದಾಸ್ :– ರೈತರ ಪರವಾಗಿ ಇರತಕ್ಕಂಥವರು ಇದಕ್ಕೆ ಮತ ಕೊಡುತ್ತಾರೆ.

ಅಧ್ಯಕ್ಷರು :– ಮಾನ್ಯ ರಾಮದಾಸ್‌ರವರೇ, ಇಲ್ಲಿರತಕ್ಕಂಥ 224 ಜನ ಸದಸ್ಯರೆಲ್ಲರೂ ಕೂಡ ರೈತರ ಪರವಾಗಿ ಇದ್ದಾರೆ. ರೈತರ ವಿರುದ್ಧ ಯಾರೂ ಸಹ ಇಲ್ಲ.

ಶ್ರೀ ಎ. ರಾಮದಾಸ್ :– ಆದ್ದರಿಂದಲೇ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಉದ್ದೇಶದಿಂದ ಎಲ್ಲರಲ್ಲಿಯೂ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :– ಈ ಮನೆಯ ನಿಯಮಾವಳಿ ಪ್ರಕಾರ ನಡೆಸಬೇಕಾಗುತ್ತದೆ. ಆದ್ದರಿಂದ ನಮ್ಮ ನಿಯಮಾವಳಿ ಪ್ರಕಾರವೇ ಈಗ ನಾನು ಮಾಡುತ್ತೇನೆ.

ಶ್ರೀ ಎ. ರಾಮದಾಸ್ :– ರೈತರ ಪರವಾಗಿ ಇರತಕ್ಕಂಥವರು ಪರವಾಗಿ ಮತ ಹಾಕಿ.

ಶ್ರೀ ಶಿವಾನಂದ ಎಸ್. ಪಾಟೀಲ್ :– ನಾವು ಅಪೀಲ್ ಮಾಡುವುದಕ್ಕೆ ಒಂದು ಅವಕಾಶವಾದರೂ ಕೊಡಿ?

ಶ್ರೀ ಬಿ. ಸೋಮಶೇಖರ್ :– ಈ ಸಂದರ್ಭದಲ್ಲಿ ನಾನ್ನೊಂದು ಮನವಿ ಮಾಡಿ ಕೊಳ್ಳುತ್ತಿದ್ದೇನೆ. ಅದೇನೆಂದರೆ, ಎಲ್ಲರೂ ಪಕ್ಷಬೇದ ಮರೆತು ಆತ್ಮ ಸಾಕ್ಷಿಗೆ ತಕ್ಕಂತೆ ಮತ ಹಾಕಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :– ಮಾನ್ಯ ಸದಸ್ಯರು ಹೇಳಿರತಕ್ಕಂಥದ್ದಕ್ಕೆ ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಆತ್ಮ ಸಾಕ್ಷಿಗೆ ತಕ್ಕಂತೆ ಎಲ್ಲರೂ ನಡೆದುಕೊಳ್ಳಬೇಕು.

ಅಧ್ಯಕ್ಷರು :– ತಿದ್ದುಪಡಿ ಪ್ರಸ್ತಾವದ ಪರವಾಗಿ ಇರತಕ್ಕಂಥವರು ದಯವಿಟ್ಟು ಕೈ ಮೇಲಕ್ಕೆ ಎತ್ತಿ.

ಅಧ್ಯಕ್ಷರು :– ತಿದ್ದುಪಡಿ ಪ್ರಸ್ತಾವದ ಪರವಾಗಿ 43 ಜನರಿದ್ದಾರೆ. ಈಗ ತಿದ್ದುಪಡಿ ಪ್ರಸ್ತಾವದ ವಿರುದ್ದವಿರತಕ್ಕಂಥವರು ಕೈ ಮೇಲಕ್ಕೆ ಎತ್ತಿ?

ಶ್ರೀ ಎಸ್. ಸುರೇಶ್ ಕುಮಾರ್ :– ಶ್ರೀಮತಿ ರಾಣಿ ಸತೀಶ್‌ರವರಿಗೆ ಮತದಾನ ಮಾಡುವುದಕ್ಕೆ ರೈಟ್ ಇಲ್ಲ. ಆದ್ದರಿಂದ, ಅವರೇಕೆ ಕೈ ಎತ್ತಿದ್ದಾರೆ?

Mr. Speaker:- She cannot she is a canc member ಅವರಿಗೆ ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್:– ದೇಶದ ಜನರು ಇವರ ಕೈಗೆ ಅಧಿಕಾರ ಕೊಟ್ಟಂಥ ಸಂದರ್ಭದಲ್ಲಿ ಇವರು ರೈತರಿಗೆ ಏನು ಮಾಡಿದ್ದಾರೆ ಎನ್ನತಕ್ಕಂಥದ್ದು ಹೇಳಲಿ.

ಅಧ್ಯಕ್ಷರು :– ಮಾನ್ಯ ಸಗೀರ್ ಅಹಮದ್‌ರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಆಹಮದ್:– ಇವರು ದೇಶದ ಬಗ್ಗೆ ಮತ್ತು ರೈತರ ಬಗ್ಗೆ ಮಾತನಾಡುತ್ತಿದ್ದಾರೆ ಆದ್ದರಿಂದ, ಇವರಿಗೆ ಅಧಿಕಾರ ಕೊಟ್ಟಂಥ ಸಂದರ್ಭದಲ್ಲಿ ರೈತರಿಗೆ ಏನು ಮಾಡಿದ್ದಾರೆ ಎನ್ನತಕ್ಕಂಥದ್ದು ಹೇಳಲಿ?

ಸಭೆಯನ್ನು ವಿಭಜಿಸಲಾಯಿತು.

ಅಧ್ಯಕ್ಷರು :– ವಿಭಜಿಸಿದಾಗ ಫಲಿತಾಂಶ ಹೀಗಿದೆ?

ಹೌದು – 43

ಇಲ್ಲ – 63

ಪ್ರಸ್ತಾಪವು "ಇಲ್ಲ" ಎನ್ನುವವರ ಪರವಾಗಿದೆ.

ತಿದ್ದುಪಡಿ ಪ್ರಸ್ತಾಪ ತಿರಸ್ಕರಿಸಲ್ಪಟ್ಟಿತು.

ಅಧ್ಯಕ್ಷರು :– ಸದನವನ್ನು ಮಧ್ಯಾಹ್ನ 3–00 ಗಂಟೆ ವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 59 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3–00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಿಯಿಸಿತು)

ಸದನವು 3–30 ಗಂಟೆಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ ಅವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೇ ....

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಏನು ನಡೆಸಿದ್ದಾರೆ ಇವರು?

ಅಧ್ಯಕ್ಷರು :– ಒಬ್ಬೊಬ್ಬರೇ ಮಾತನಾಡಿ. I will allow Mr. Mudda Hanumegowda....

ಶ್ರೀ ಜಗದೀಶ್ ಶೆಟ್ಟರ್ :– ಇದೇನು ಶೂನ್ಯವೇಳೆನಾ?

ಅಧ್ಯಕ್ಷರು :– ಹೌದು.

ಶ್ರೀ ಬಿ. ಸೋಮಶೇಖರ್ :– ಆಮೇಲೆ ಪ್ರಸ್ತಾಪ ಮಾಡಲಿ ಕ್ಯಾರಿಫಿಕೇಶನ್‌ಗೆ ಅವಕಾಶ ಮೊದಲು ಕೊಡಿ.

ಅಧ್ಯಕ್ಷರು : ಮುದ್ದಹನುಮೇಗೌಡರೇ, ಈ ಇಶ್ಯು ಏನಿದೆಯಲ್ಲಾ ಅದು ಮುಗಿಯಲಿ ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ :- ಇವತ್ತು ಏನಾಗಿದೆ ಎಂದರೆ ರಾಜ್ಯದ ಕಬ್ಬುಬೆಳೆಗಾರರನ್ನು ಕಾರ್ಮೋಡ ಮುಸುಕಿದೆ ಕೇಂದ್ರ ಸರ್ಕಾರ ಇವತ್ತು ಅನ್ಯಾಯ ಮಾಡುತ್ತಿದೆ. ದಯಮಾಡಿ ಕೇಂದ್ರ ಸರ್ಕಾರ ಈ ರೀತಿ ಮಲತಾಯಿ ಧೋರಣೆಯನ್ನು ಮಾಡದೆ.....

ಗೊಂದಲ

ಅಧ್ಯಕ್ಷರು :- ಯಾರಾದರೂ ಒಬ್ಬರು ಮಾತನಾಡಿ ಎಲ್ಲರೂ ಮಾತನಾಡಿದರೆ ಅವರುಬ ಬರೆದುಕೊಳ್ಳುವುದಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಇವತ್ತು ನಮ್ಮ ರಾಜ್ಯದ ಕಬ್ಬು ಬೆಳೆಗಾರರಿಗೆ ಏನೂ ಸಹಾಯ ಮಾಡದೇಹೋದರೆ, ನಾವು ಸುಮ್ಮನೆ ಕುಳಿತುಕೊಂಡರೆ ಕಬ್ಬು ಬೆಳೆಗಾರರು ನಮಗೆ ಶಾಪ ಹಾಕುತ್ತಾರೆ.

ಗೊಂದಲ

ಅಧ್ಯಕ್ಷರು :- ನಮ್ಮ ಮುಂದೆ ಮೋಶನ್ ಏನಿದೆ ಅದನ್ನು ಮುಕ್ತಾಯ ಮಾಡೋಣ. ಹತ್ತು ನಿಮಿಷದಲ್ಲಿ ಅದು ಮುಗಿಯುತ್ತದೆ. ಆಮೇಲೆ ನೀವೇ ಪ್ರಸ್ತಾಪ ಮಾಡುವಿರಂತೆ.

4. ವಿಷಯ:- ನಿಯಮ 159ರ ಮೇಲಿನ ಪ್ರಸ್ತಾವದ ಚರ್ಚೆ (ಬರಗಾಲಕ್ಕೆ ಸಂಬಂಧಪಟ್ಟಂತೆ)

+ **ಶ್ರೀ ಜಗದೀಶ್ ಶೆಟ್ಟರ್** :- ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಈಗಾಗಲೇ ಕೆಲವೊಂದು ವಿಷಯಗಳ ಬಗ್ಗೆ ಸ್ಪಷ್ಟೀಕರಣವನ್ನು ಕೊಟ್ಟರು. ನಾವೇನು ಈ ಬರಗಾಲ ವಿಷಯದ ಬಗ್ಗೆ ಚರ್ಚೆಯನ್ನು ಮಾಡಿದ್ದೆವು. ಬರಗಾಲ ಕಾಮಗಾರಿಗಳ ಬಗ್ಗೆ ಏನು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೆವು. ಅದರ ಬಗ್ಗೆ ಹಲವಾರು ಮಾಹಿತಿಗಳನ್ನು ಅವರು ಕೊಟ್ಟರು. ಆದರೆ ಮುಖ್ಯವಾಗಿ ಯಾವ ವಿಷಯದ ಬಗ್ಗೆ ಅವರು ಹೇಳಬೇಕಾಗಿತ್ತು ಮತ್ತು ಸ್ಪಷ್ಟೀಕರಣವನ್ನು ಕೊಡಬೇಕಾಗಿತ್ತು ಆ ವಿಷಯಗಳ ಬಗ್ಗೆ ಅವರು ಸ್ಪಷ್ಟೀಕರಣವನ್ನು ಕೊಟ್ಟಿಲ್ಲ. ಹಲವಾರು ಪ್ರಾಮುಖ್ಯವಾದಂಥ ಇಶ್ಯುಗಳನ್ನು ನಾವು ಎತ್ತಿದ್ದೆವು. ಮೊದಲನೆಯದಾಗಿ ಈ ಬರಗಾಲ ಕಾಮಗಾರಿಗಳಲ್ಲಿ ನಡೆದಂಥ ಅವ್ಯವಹಾರಗಳ ಬಗ್ಗೆ ನಾವು ಪ್ರಸ್ತಾಪ ಮಡಿದ್ದೆವು. ಅದರ ಬಗ್ಗೆ ಏನೋ ಇಪ್ಪತ್ತು-ಮೂವತ್ತು ಕೇಸುಗಳನ್ನು.....

ಅಧ್ಯಕ್ಷರು :- ಮೂವತ್ತೈದು ಅಂತ ಅವರು ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :- 35 ಕೇಸ್‌ಗಳು ಬುಕ್ ಆಗಿವೆ. ಇಷ್ಟು ದೊಡ್ಡ ಕೆಲಸ ಮಾಡುವುದಕ್ಕೆ ನಾವು ಹೊರಟಿದ್ದೇವೆ ಅಂತ ಹೇಳಿ ಅದನ್ನು vague ಆಗಿ ಇದರಲ್ಲಿ ಏನೂ ಅವ್ಯವಹಾರ ಆಗಿಯೇ ಇಲ್ಲ, ಏನೂ ನಡೆದೇ ಇಲ್ಲ ಎನ್ನುವ ಮಟ್ಟಿಗೆ ಅವರು ಮಾತನಾಡಿದರು. ಇವತ್ತು ನಾನು ಹೇಳುತ್ತೇನೆ. ಮಾನ್ಯ ಖರ್ಗೆಯವರು ಇನ್ನೂ ಬಂದಿಲ್ಲ.

ಅಧ್ಯಕ್ಷರು :- ಬರುತ್ತಾರೆ. He is on the way

ಗೊಂದಲ

ಶ್ರೀ ಎಂ.ಎಸ್. ಆತ್ಮಾನಂದ :- ಅಧ್ಯಕ್ಷರೇ.....

ಶ್ರೀ ಜಗದೀಶ್ ಶೆಟ್ಟರ್ :- ಸನ್ಮಾನ್ಯ ಅಧ್ಯಕ್ಷರೇ, ನಾನು ಯೀಲ್ಡ್ ಆಗಿಲ್ಲ. ಅವರು ಏಕೆ ಮಾತನಾಡುತ್ತಿದ್ದಾರೆ? ಆಮೇಲೆ ಬೇಕಾದರೆ ಅವರು ಮಾತನಾಡಲಿ.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)